ಸೈಡ್ ರೋಲ್ ಅಷ್ಟೇ. ಅಮ್ಮು ಎಸ್ಟೇಟು ರವಿ ಕೈಗೆ ಬರುವುದಾದರೆ ಬರಲಿ, ನಂತರ ಅವನ ಎಲ್ಲಾ ದೌರ್ಬಲ್ಯಗಳನ್ನು ಬಲ್ಲ ನಮಗೆ ಅವನಿಂದ ಅದನ್ನು ಸ್ವಲ್ಪ ಸುಲಭವಾಗಿ ಬಿಡಿಸಿಕೊಳ್ಳಬಹುದು ಎಂದು ನನ್ನ ಹಂಚಿಕೆಯಾಗಿತ್ತು. ಆದ್ದರಿಂದ ಆ ಫೋರ್ಜರಿ ಮಾಡಿದ, ಮದುವೆ ಕತೆಯ, ಮರಣಪತ್ರಕ್ಕೆ, ನಾನೂ ಸುಳ್ಳು ಸಾಕ್ಷಿಯಾಗಲು ಒಪ್ಪಿಕೊಂಡೆ. ನಾನು ಹೆಚ್ಚು ಅಂದರೆ ಇನ್ನು ಮೂರು ತಿಂಗಳಿರಬಹುದು, ಅದಕ್ಕೆ ಮುಂಚೆ ಈಗ ಆ ಎಸ್ಟೇಟಿನ ನಿಜವಾದ ವಾರಸುದಾರರಾದ ವಿಜಯಮ್ಮನವರ ಕುಟುಂಬಕ್ಕೆ ಯಾವ ಕಾನೂನಿನ ತೊಡಕೂ ಆಗದ ಹಾಗೆ, ನನ್ನ ತಪ್ಪೊಪ್ಪಿಗೆಯ ಒಂದು ನೋಟರೈಸ್ಡ್ ಅಫಿಡವಿಟ್ ಮಾಡಿ ನಿಮಗೆ ಕಳುಹಿಸುತ್ತೇನೆ, ಆಗಬಹುದಾ?'

'ಸರಿ, ಅದು ಬೇಗ ಮಾಡಿ. ನಮಗೆ ಅದು ರವಿಯ ಕ್ರಿಮಿನಲ್ ಇಂಟೆಂಟ್ ಮತ್ತು ಮೋಟಿವ್ ಸಾಬೀತು ಮಾಡುವ ಒಂದು ಮುಖ್ಯ ಪುರಾವೆ'.

'ನನ್ನ ಈ ಜನ್ಮದ ಕರ್ಮಕೃತ್ಯಗಳನ್ನೆಲ್ಲಾ ಶುದ್ಧಿ ಮಾಡುವುದಕ್ಕೆ, ನಾನು ಇನ್ನೂ ಮೂರು ಜನ್ಮ ಕಸಬರಿಕೆ ಹಿಡಿದು ನಿಲ್ಲಬೇಕೇನೊ? ಅದು ಉಳಿದ ಈ ಕೊನೆಯ ದಿನಗಳಿಂದಾದರೂ ಆರಂಭವಾಗಲಿ'.

ಮಾಡಿದ ಪಾಪಕೃತ್ಯಗಳನ್ನು ಮನಗಂಡು, ಮರುಗಿ, ಪಶ್ಚಾತ್ತಾಪದಲ್ಲಿ ಬೇಯುತ್ತಾ, ಪ್ರಾಯಶ್ಚಿತ್ತಕ್ಕೆ ಮನಪೂರ್ವಕವಾಗಿ ಒಡ್ಡಿಕೊಳ್ಳುವುದೇ ನಮ್ಮೊಳಗಿನ ವಿಜಯದಶಮಿ.

'ಮಾಯಣ್ಣ, ನಿಮಗೆ ಇನ್ನೊಂದು ಗುಟ್ಟಿನ ವಿಷಯ ಹೇಳಬೇಕಿತ್ತು. ನಾಳೆ ಬೆಳಿಗ್ಗೆ ಏಳು ಗಂಟೆಗೆ ನಾನು ನಿಮಗೆ ಫೋನ್ ಮಾಡಬಹುದಾ? ಆದರೆ ಇದು ಅಮ್ಮು ಕೊಲೆಗೆ ಸಂಬಂಧ ಪಡದೇಯಿರುವುದು'.

'ಆಯಿತು ಮಾಡಿ'.

ವಿನಯ್ ಬಾಗಿಲಲ್ಲಿ ನಿಂತಿದ್ದ.

'ಸಾರ್, ಚಂದ್ರನ್ ಬಂದಿದ್ದಾರೆ'.

'ಶೋ ಹಿಮ್ ಇನ್ ವಿನಯ್'.

ಒಳಗೆ ಬಂದ ಚಂದ್ರನ್ ಐವತ್ತು ದಾಟಿದವನಾದರೂ, ಇನ್ನೂ ನಲವತ್ತರ ನಡಿಗೆಯ ನಿಲುವು. ಶಾಲಾ ಮಕ್ಕಳಂತೆ ನೀಟಾಗಿ ಬೈತಲೆ ತೆಗೆದು ಬಾಚಿದ ಕ್ರಾಪು. ಟಕ್ ಮಾಡಿದ ಶರ್ಟ್. ನುಣ್ಣನೆ ಕ್ಷೌರ, ನಾಜೂಕಾಗಿ ತೀಡಿದ ಮೀಸೆ, ಸೈನ್ಯದಲ್ಲಿದ್ದವ ಎಂದು ಹೇಳುವಂತಿತ್ತು. ಅವನಿಗೆ ಕೂರಲು ಕುರ್ಚಿ ತೋರಿ, ಅವನ ಸಮತೋಲನ ತಪ್ಪಿಸುವಂತೆ,

'ಬನ್ನಿ... ಮಡಿಕೇರಿಯಲ್ಲಿ ನೋಡಿದರೆ ರಿಯಾಜ್ ಕೊಲೆ ಯತ್ನದ ಕೇಸು ಬೀಳಬಹುದು. ಇಲ್ಲಿ ನೋಡಿದರೆ ಎಸ್ಟೇಟಿನ ಹಣದ ದುರ್ಬಳಕೆ ಮತ್ತು ಅದನ್ನು ಮುಚ್ಚಿಹಾಕಲು ಇನ್ನೇನೋ... ಮನೇಲಿ ಮದುವೆ ಕಾರ್ಯದ ಸಿದ್ಧತೆ ನಡೆದಿದೆ. ಫಸ್ಟ್ ಚಾಪ್ಟರ್ ಪೂವಯ್ಯ ನೋಡಿಕೊಳ್ತಾರೆ, ಸೆಕೆಂಡ್ ಚಾಪ್ಟರ್‌ಗೆ ಬನ್ನಿ'.

'ಕಾಶ್ಮೀರದಲ್ಲಿ ಒಂದು ಟೆರರಿಸ್ಟ್ ಹೈಡೌಟ್ ಆಪರೇಷನ್‌ನಲ್ಲಿ ಹೆಚ್ಚು ಕಡಿಮೆ ಸತ್ತೇಹೋದೆ ಅನ್ನೋ ಗಳಿಗೆಯಲ್ಲಿ ಕ್ಯಾಪ್ಟನ್ ಮುತ್ತಣ್ಣನವರು, ಅವರ ಜೀವ ಪಣಕ್ಕಿಟ್ಟು ನನ್ನ ಜೀವ ಉಳಿಸಿದರು. ಮರುಜನ್ಮ ಕೊಟ್ಟ ಅವರು ನನಗೆ ತಂದೆ ಸಮಾನ. ಹಾಗಿರುವಾಗ ನಾನು ಅವರಿಗಾಗಲಿ, ಅವರ ಕುಟುಂಬದವರಿಗಾಗಲಿ ದ್ರೋಹ ಮಾಡುವುದಿರಲಿ, ಆ ಬಗೆಯ ಯೋಚನೆ ಮಾಡುವುದಕ್ಕೂ ಆಗುವುದಿಲ್ಲ. ಕೇಳಿ, ಏನು ಬೇಕು ಕೇಳಿ. ನನಗೆ ಗೊತ್ತಿದ್ದಷ್ಟು ಹೇಳುತ್ತೇನೆ'.

'ನೀವು ಹೇಳಿದ್ದನ್ನೆಲ್ಲಾ ರೆಕಾರ್ಡ್ ಮಾಡ್ತೀವಿ... ಗೊತ್ತಿರಲಿ ನಿಮಗೆ'.

'ಅಡ್ಡಿಯಿಲ್ಲ... ಮಾಡಿಕೊಳ್ಳಿ'.

'ನಿಮ್ಮ ಎಸ್ಟೇಟಿನ ಕಿತ್ತಳೆ ತೋಟದ ಈ ವರ್ಷದ ಕಾಂಟ್ರಾಕ್ಟ್ ರಿಯಾಜ್‌ಗೆ ಕೊಟ್ಟು ಅವನಿಂದ ಗುತ್ತಿಗೆ ಹಣ ಹದಿನೈದು ಲಕ್ಷ ಕ್ಯಾಷ್ ರೂಪದಲ್ಲಿ ಪಡೆದದ್ದು ನಿಜವಾ?'

'ಹೌದು. ಹೋದ ತಿಂಗಳ ಮೊದಲನೇ ದಿನ, ನಮ್ಮ ಎಸ್ಟೇಟ್ ಆಫೀಸಿನಲ್ಲೇ, ಬೆಳಿಗ್ಗೆ ಹನ್ನೊಂದು ಗಂಟೆಗೆ'.

'ನೀವು ಏನು ಮಾಡುದ್ರೀ ಆ ಕ್ಯಾಷ್?'

'ಅದು ನನ್ನಲ್ಲೇ ಇತ್ತು'.

'ಎಸ್ಟೇಟಿನ ಅಷ್ಟು ದೊಡ್ಡ ಮೊತ್ತ ನಿಮ್ಮಲ್ಲೇ... ಎಸ್ಟೇಟಿನ ಲೆಕ್ಕದ ಪುಸ್ತಕಕ್ಕೂ ಬರದಂತೆ... ಅದು ಹೇಗೆ ಸಾಧ್ಯ?'

'ಎಲ್ಲಾ ಅಮ್ಮು ಮೇಡಮ್ ಸೂಚನೆಯಂತೆ'.

'ಈಗ ಎಲ್ಲಿದೆ ಆ ಹಣ?'

'ಕಳೆದ ಶುಕ್ರವಾರ ಮಧ್ಯಾಹ್ನ ಹನ್ನೆರಡು ಗಂಟೆಗೆ ಅಮ್ಮು ಮೇಡಮ್ ಬಂದಿದ್ದರು. ಅಷ್ಟನ್ನು ಅವರೇ ಸಾಯಂಕಾಲ ಐದು ಗಂಟೆಗೆ ತೆಗೆದುಕೊಂಡು ಹೋದರು'.

'ನೀವು ಅವರಿಗೆ ಕ್ಯಾಶ್ ಕೊಟ್ಟಾಗ ಬೇರೆ ಯಾರಾದ್ರೂ ಇದ್ರಾ?'

'ಇಲ್ಲ. ಸೆಕ್ಯೂರಿಟಿ ಇಷ್ಯೂ ಆಗುತ್ತೆ ಅಂತ ಯಾರ ಮುಂದೇನು ಕೊಡಲಿಲ್ಲ'.

'ಅವತ್ತೇ ರಾತ್ರಿ ನೀವು ಬೆಂಗಳೂರಿಗೆ ಬಂದಿದ್ದು ನಿಜವಾ?'

'ಹೌದು, ಗುಡ್ಡದ ಮೇಲಿನ ಬೋರ್‌ವೆಲ್ ಡಿಸ್ಚಾರ್ಜ್ ಕಡಿಮೆಯಾಗಿತ್ತು. ಅದಕ್ಕೆ ಬೆಂಗಳೂರಿನಲ್ಲಿ ಡ್ರಿಪ್ ಇರಿಗೇಷನ್ ಬಗ್ಗೆ ವಿಚಾರಿಸುವುದಿತ್ತು'.

'ಅಮ್ಮು ಅವರ ಜೊತೆ, ಅವರ ಕಾರಿನಲ್ಲೇ ಬರಬಹುದಿತ್ತಲ್ಲ'.

'ಅದು ಆಮೇಲೆ ಯೋಚನೆ ಮಾಡಿ ಬಂದಿದ್ದು'.

'ರಾತ್ರಿ ಎಲ್ಲಿ ಇದ್ರೀ...'

'ತಪೋವನ ಲಾಡ್ಜ್‌ನಲ್ಲಿ'.

'ಡ್ರಿಪ್ ಇರಿಗೇಷನ್ ವಿಚಾರಿಸಲು ಬೆಂಗಳೂರಿನಲ್ಲಿ ಯಾವ ಏಜೆನ್ಸಿಗೆ ಹೋಗಿದ್ರಿ?'

'ಭಗೀರಥ ಏಜೆನ್ಸಿ'.

'ಆಮೇಲೆ ಅಮ್ಮು ಮನೆಗೆ ಹೋಗಿದ್ರಾ?'

'ಹೋಗಿದ್ದೆ... ಆದರೆ ಅವರ ಮನೆ ರಸ್ತೆ ತಿರುವಿನ ತನಕ ಹೋಗಿ, ವಾಪಸ್ ಬಸ್ ಸ್ಟೇಷನ್ನಿಗೇ ಹೊರಟೋದೆ... ಬಸ್ ಮಿಸ್ ಆಗಬಹುದು ಅಂತ'.

'ಮಡಿಕೇರಿಗೆ ಬೇಕಾದಷ್ಟು ಬಸ್ಸುಗಳಿವೆಯಲ್ಲಾ?'

'ಇಲ್ಲ ಸ್ವಲ್ಪ ಬೇಗ ಹೋಗಬೇಕಿತ್ತು'.

'ನೀವು ಕ್ಯಾಶ್ ಕೊಟ್ಟಿದ್ದರೆ ಅದು ಅಮ್ಮು ಮನೆಯಲ್ಲಿ ನಮಗೆ ಸಿಗಬೇಕಿತ್ತಲ್ಲವೇ?'

'ಅದು ನನಗೆ ಗೊತ್ತಿಲ್ಲ, ಅದನ್ನು ನೀವೇ ಪತ್ತೆ ಮಾಡಬೇಕು'.

'ನಿಮ್ಮ ಮಗನ ಮದುವೆಗೆ ಸುಮಾರು ಖರ್ಚು ಬೀಳಬಹುದಲ್ಲವೇ?'

'ಹೌದು. ನನ್ನ ಮಿಸ್ಸೆಸ್ ನಿಮಗೆ ಹೇಳಿದ ಹಾಗೆ, ಬೆಂಗಳೂರಿನಲ್ಲಿ ಅವನಿಗೆ ಬಿಸಿನೆಸ್ ಸೆಟಪ್ ಮಾಡೋದಕ್ಕೆ ಮತ್ತು ಅವನ ಮದುವೆಗೆ ಎಲ್ಲಾ ಸೇರಿ ಸುಮಾರು 20 ಲಕ್ಷ ಖರ್ಚು ಬೀಳಬಹುದು'.

'ಮತ್ತೆ ಆ ದುಡ್ಡೆಲ್ಲ ಎಲ್ಲಿಂದ ಹೊಂದುಸ್ತೀರಿ?'

'ನಮ್ಮ ಊರು ಕಾಸರಗೋಡಲ್ಲಿ ನಮ್ಮ ಆಸ್ತಿ ಮನೆ ಎಲ್ಲ ಇದೆ... ನನ್ನ ಪಾಲಿನದು ನಮ್ಮ ಅಣ್ಣನಿಗೆ ಮಾರಿಬಿಟ್ಟೆ... ಅವರು ಹೋದ ತಿಂಗಳು ತೀರಿ ಹೋದರು... ಈಗ ಆ ಆಸ್ತಿ ಅವರ ಮಗನಿಗೆ ಬಿಟ್ಟು ಕೊಡಬೇಕಷ್ಟೆ'.

'ಮಾರಿ ಬಂದ ದುಡ್ಡನ್ನು ಕ್ಯಾಷಲ್ಲಿ ಪಡೆದುಕೊಂಡರಾ?'

'ಹೌದು...'

'ಅದಕ್ಕೆ ಯಾರಾದರೂ, ಏನಾದರೂ ಸಾಕ್ಷಿ...'

'ಇಲ್ಲ...'

'ಎಷ್ಟು ಹಣ ಬಂತು?'

'ಸುಮಾರು ಹದಿನಾರು ಲಕ್ಷ...'

'ಕಾಟಯ್ಯ ಬನ್ನಿ ಇಲ್ಲಿ... ಚಂದ್ರನ್ ಅವರಿಗೆ ಕಾಫಿ ತನ್ನಿ'.

'ಯೆಸ್ ಸಾರ್...'

'ಕಾಟಯ್ಯ ಹಾಗೆ ಆ ರೆಕಾರ್ಡ್ ರೂಮಿಗೆ ಬಂದು ನಾನು ಹೇಳಿದ ಆ ಹಳೆ ಫೈಲ್ ತೋರಿಸಿ ಬನ್ನಿ...'

ಎದ್ದು ರೆಕಾರ್ಡ್ ರೂಮಿಗೆ ಹೋದ ಮಾಯಣ್ಣ ಮತ್ತೆ ತನ್ನ ಸೀಟಿಗೆ ಬಂದು ಕೂತ, ಸ್ವಲ್ಪ ಹೊತ್ತಿನಲ್ಲಿಯೇ ಬಂದು ಕಾಫಿ ಕುಡಿಯುತ್ತಾ–

'ಚಂದ್ರನ್ ನೀವೂ ಕಾಫಿ ತಗೊಳ್ಳಿ...'

ಅಷ್ಟು ಬಿಸಿ ಇದ್ದರೂ ಕಾಫಿ ಗಟಗಟನೆ ಗಂಟಲಿಗೆ ಸುರಿದುಕೊಂಡ ಚಂದ್ರನ್ ಮನಸ್ಸು ಇನ್ನೆಲ್ಲಿಗೋ ಜಾರಿದಂತಿತ್ತು.

'ಓಕೆ ಚಂದ್ರನ್.... ನೀವು ಹೊರಡಬಹುದು... ನಮ್ಮ ವಿನಯ್ ಅವರಿಗೆ ಏನೇನು ವಿವರಗಳು ಬೇಕೊ ಕೊಟ್ಟುಹೋಗಿ... ಆದರೆ ಎಲ್ಲಿಗೆ ಹೋಗಬೇಕಾದರೂ ನಮಗೆ ಹೇಳಿ ಹೋಗಬೇಕು ಮತ್ತು ನಾವು ಯಾವಾಗ ಕರೆದರೂ ತಕ್ಷಣ ಬರಬೇಕು, ಏನು?'

'ಆಯಿತು ಸಾರ್...'

ಚಂದ್ರನ್ ಹೊರಟ ಮೇಲೆ, 'ವಿನಯ್, ರೆಕಾರ್ಡಿಂಗ್ ಒಂದೆರಡು ಸಾರಿ ಚೆಕ್ ಮಾಡಿ... ಚಂದ್ರನ್ ಹೇಳಿದ ಪ್ರತಿಯೊಂದು ಪಾಯಿಂಟೂ ವೆರಿಫೈ ಮಾಡಿ... ಟೈಮು ಮತ್ತು ಲೊಕೇಷನ್ ಎಲ್ಲಾ ಟ್ಯಾಲಿ ಆಗುತ್ತಾ ನೋಡಿ. ಏನೇ ವ್ಯತ್ಯಾಸ ಇದ್ದರೂ ಹೇಳಿ'.

'ಯೆಸ್ ಸಾರ್'.

ಸ್ವಲ್ಪ ಹೊತ್ತಿನಲ್ಲಿಯೇ ಭುಜಂಗ, ಫೋರ್‌ಮನ್ ಮುರುಗನ್ ಜೊತೆ ಪ್ರತ್ಯಕ್ಷನಾಗಿದ್ದ.

'ನಮಸ್ತೆ ಸಾರ್... ಬರದಕ್ಕೆ ಹೇಳುದ್ರಂತೆ ಸಾರ್'.

'ನಿಮ್ಮ ಜಯಂತ್ ಸಾರ್ ಎಲ್ರೀ...?'

'ಸಾರ್, ಅದು ನಮಗೂ ಗೊತ್ತಿಲ್ಲ ಸಾರ್'.

'ಮೊದಲು ಯಾವಾಗಲಾದರೂ ಈ ರೀತಿ ಎರಡು ಮೂರು ದಿನ ಎಲ್ಲಾದ್ರು ಹೋಗಿ ಇದ್ರಾ?'